## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ., ಸೊರಬ

**ಉಪಸ್ಥಿತರು:** ಶ್ರೀ ರಾಜು .ಕೃ. ಶೇಡಬಾಳ್‌ಕರ್
ಬಿ.ಕಾಂ., ಎಲ್.ಎಲ್.ಬಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಸೊರಬ.

ದಿನಾಂಕ: 18 ನೇ ಜೂನ್ -2026

**ಅಸಲು ದಾವೆ ಸಂಖ್ಯೆ: 31/2025**

**ವಾದಿ** : ಎನ್.ಎಲ್ ಸುಮಂತ.

**- ವಿರುದ್ಧ -**

**ಪ್ರತಿವಾದಿಯರು:** ಉಮೇಶ್.

**ಮಧ್ಯಂತರ ಅರ್ಜಿ ಸಂಖ್ಯೆ I:**

**ಅರ್ಜಿದಾರರು** : ಎನ್.ಎಲ್ ಸುಮಂತ ಬಿನ್ ಎಸ್.ಲಕ್ಷ್ಮೀನಾರಾಯಣ
ಇವರ ಪರವಾಗಿ ಸಾಮಾನ್ಯ ಅಧಿಕಾರ ಪತ್ರ(ಉ.ಕ)
ಹೊಂದಿದ ಇವರ ತಂದೆ
ಎನ್.ಎಸ್ ಲಕ್ಷ್ಮೀನಾರಾಯಣ ಬಿನ್ ಶ್ರೀನಿವಾಸರಾವ್
ಸುಮಾರು 53 ವರ್ಷ,
ವಾಸ: ಉಳವಿ ಹೋಬಳಿ, ಮೂಡುಗೋಡು ಗ್ರಾಮ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

**(ವಾದಿಯ ಪರ ಶ್ರೀ. ಎಮ್.ಸಿ.ಬಿ., ವಕೀಲರು)**

**- ವಿರುದ್ಧ -**

**ಎದುರುದಾರರು :** ಉಮೇಶ ಬಿನ್ ಚಂದ್ರಪ್ಪ,
ಸುಮಾರು 47 ವರ್ಷ,
ವಾಸ: 7 ನೇ ಕ್ರಾಸ್, ನೆಹರು ನಗರ,
ಸಾಗರ ಟೌನ್, ಸಾಗರ ತಾಲ್ಲೂಕು.

**(ಎದುರುದಾರರ ಪರ ಶ್ರೀ.ಕೆ.ಪಿ.ಎಮ್., ವಕೀಲರು)**

**ಸಿವಿಲ್ ಪ್ರಕ್ರಿಯೆ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ರ ಅಡಿಯಲ್ಲಿ ವಾದಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ I ರ ಮೇಲಿನ ಆದೇಶ**

ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆ ಪರಿಹಾರ ಕೋರಿ ಸಲ್ಲಿಸಿರುತ್ತಾರೆ. ವಾದಿಯು ವಾದ ಪತ್ರದೊಂದಿಗೆ ಮಧ್ಯಂತರ ಅರ್ಜಿ ಸಂಖ್ಯೆI ಅನ್ನು ಸಲ್ಲಿಸಿ, ದಾವೆಯನ್ನು ಅಂತಿಮವಾಗಿ ತೀರ್ಮಾನವಾಗುವವರೆಗೆ ಪ್ರತಿವಾದಿಯಾಗಲೀ, ಅವರ ತರ್ಫಿನ ಜನರಾಗಲೀ ಯಾರೇ ಆಗಲೀ ದಾವಾ ಸ್ವತ್ತಿಗೆ ಅಕ್ರಮ ಪ್ರವೇಶ ಮಾಡಿ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಅಡ್ಡಿ ಆತಂಕಪಡಿಸದಂತೆ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಆದೇಶವನ್ನು ನೀಡಬೇಕೆಂದು ಕೋರಿರುತ್ತಾರೆ.

**ಶೆಡ್ಯೂಲ್**

ಸೊರಬ ತಾಲ್ಲೂಕು, ಉಳವಿ ಹೋಬಳಿ, ಮೂಡುಗೋಡು ಗ್ರಾಮದ ಸರ್ವೆ ನಂ.1/10 ರ ಒಟ್ಟು 16 ಗುಂಟೆ ಜಮೀನಿನಲ್ಲಿ 01 ಗುಂಟೆ ಖರಾಬು ವಜಾಜಾತ 0-15 ಗುಂಟೆ ಖುಷ್ಕಿ ಜಮೀನು. ಇದಕ್ಕೆ ಚಕ್ಕುಬಂದಿಃ- ಪೂರ್ವಕ್ಕೆಃ ಹಕ್ಕಿ ಶಿವಪ್ಪ ಇವರ ಜಮೀನು. ಪಶ್ಚಿಮಕ್ಕೆಃ ರಸ್ತೆ. ಉತ್ತರಕ್ಕೆಃ ಮಹಾಬಲೇಶ್ವರ ಭಟ್ಟ ಇವರ ಹಿತ್ತಲು. ದಕ್ಷಿಣಕ್ಕೆಃ ಎಂ.ಕೆ ಬಹಾಬಲಗಿರಿ ಇವರ ಹಿತ್ತಲು ಜಾಗ. ಈ ದಾವೆಯು ವಸ್ತು ವಿಷಯವಾಗಿದ್ದು, ಇನ್ನು ಮುಂದೆ ದಾವಾ ಸ್ವತ್ತು ಎಂದು ಸಂಬೋದಿಸಲಾಗುವುದು.

2. ಸದರಿ ಮಧ್ಯಂತರ ಅರ್ಜಿ ಸಂಖ್ಯೆI ರೊಂದಿಗೆ ವಾದಿಯು ತನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ, ವಾದಿ ಮತ್ತು ಪ್ರತಿವಾದಿ ತುಂಬಾ ಪರಿಚಯಸ್ಥರು, ವಿಶ್ವಾಸಿಗರಾಗಿರುತ್ತಾರೆ. ವಾದಿಯ ಮನ ಹೆಸರಿಗೆ ಸೊರಬ ತಾಲ್ಲೂಕು, ಉಳವಿ ಹೋಬಳಿ, ಮೂಡುಗೋಡು ಗ್ರಾಮದ ಸರ್ವೆ ನಂಬರ್ 1/10 ರಲ್ಲಿ ಒಟ್ಟು ವಿಸ್ತೀರ್ಣ 00.16 ಗುಂಟೆ ಖುಷ್ಕಿ ಜಮೀನು ಇದ್ದು, ಸದರಿ ಸ್ವತ್ತನ್ನು ವಾದಿಯ ಮಗ ತಮ್ಮ ಗೃಹಕೃತ್ಯದ ಅಡಚಣೆ ಸಂಬಂಧ ಮಾರಾಟ ಮಾಡಲು ತೀರ್ಮಾನಿಸಿದ್ದು, ಸದರಿ ಸ್ವತ್ತನ್ನು ಅಂದರೆ ಸರ್ವೆ ನಂಬರ್ 1/10 ರಲ್ಲಿ 00-01 ಗುಂಟೆ ಖರಾಬು ವಜಾಜಾತ ಉಳಿದ 00-15 ಗುಂಟೆ ಜಮೀನನ್ನು 4,50,000/- ಕ್ರಯಕ್ಕೆ ಪಡೆಯಲು ಕೇಳಿದ್ದು, ಸದರಿ ಬೆಲೆಯು ವಾದಿಗೆ ಒಪ್ಪಿಗೆಯಾಗಿದ್ದರಿಂದ ಈ ಬೆಲೆಗೆ ಕ್ರಯಕ್ಕೆ ಕೊಡಲು ಒಪ್ಪಿಕೊಂಡು ದಿಃ 18.10.2024 ರಂದು ಕ್ರಯಪತ್ರವನ್ನು ಬರೆಯಿಸಿ, ಸದರಿ ಕ್ರಯಪತ್ರವನ್ನು ದಿಃ 19.10.2024 ರಂದು ಸೊರಬ ಸಬ್ ರಿಜಿಸ್ಟ್ರಾರ್ ರವರ ಕಛೇರಿಯಲ್ಲಿ ಖಾತೆದಾರರ ಅಂದರೆ ವಾದಿಯ ಮಗ ಎನ್.ಎಲ್ ಸುಮಂತ ಮತ್ತು ಇವರ ಹೆಂಡತಿ ಪಲ್ಲವಿ ಇವರಿಂದ ಕಾನೂನು ಬದ್ಧವಾಗಿ ನೊಂದಾವಣೆ ಮಾಡಿಸಿ ಕೊಟ್ಟಿದ್ದು, ಸದರಿ

ಕ್ರಯಪತ್ರವು ಸೊರಬದ ಉಪನೊಂದಣಾಧಿಕಾರಿಗಳ ಕಛೇರಿಯ 1 ನೇ ಪುಸ್ತಕದ ದಸ್ತಾವೇಜು ನಂಬರ್ ಎಸ್,ಆರ್.ಬಿ-1-02592-2024-25 ದಿಃ 19.10.2024 ರಂದು ನೊಂದಾಗಿರುತ್ತದೆ.

3. ಮುಂದುವರೆದು, ಪ್ರತಿವಾದಿ ಕ್ರಯದ ವ್ಯವಹಾರದ ಮೊತ್ತವಾದ ರೂ.4,50,000/- ಗಳನ್ನು ದಿಃ 19.10.2024 ರಂದು ಕೆನರಾ ಬ್ಯಾಂಕ್, ಸಾಗರ ಶಾಖೆಯ ಚೆಕ್ ನಂಬರ್ 557839 ರಂತೆ ಎನ್.ಎಲ್ ಸುಮಂತ ಬಿನ್ ಎನ್.ಎಸ್ ಲಕ್ಷ್ಮೀನಾರಾಯಣ ಇವರ ಖಾತೆಗೆ ಕ್ರಯದ ಹಣ ವರ್ಗಾವಣೆ ಮೂಲಕ ಕ್ರಯದ ಹಣ ಸಂದಾಯವಾಗುವಂತೆ ಚಕ್ಕನ್ನು ಕೊಟ್ಟಿದ್ದು ವಾದಿಗೆ ಪ್ರತಿವಾದಿ ತುಂಬಾ ಪರಿಚಯಸ್ಥರು, ವಿಶ್ವಾಸಿಗರು ಆಗಿರುವುದರಿಂದ ಕ್ರಯದ ಮೊತ್ತ 4,50,000/- ಗಳನ್ನು ಚಕ್ಕಿನ ಮೂಲಕ ಪಡೆಯಲು ಒಪ್ಪಿ ಚೆಕ್ಕನ್ನು ಪಡೆದುಕೊಂಡು ದಿಃ 19.10.2024 ರ ಚೆಕ್ಕನ್ನು ವಾದಿಯ ಮಗ ಸುಮಂತ ಎನ್.ಎಲ್ ಖಾತೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಾಗರ ಬ್ರಾಂಚ್ ಖಾತೆ ನಂಬರ್ 32146044081 ಖಾತೆಗೆ ಚೆಕ್ಕಿನ ಮೊತ್ತ ಜಮಾ ಮಾಡಲು ಸದರಿ ಬ್ಯಾಂಕಿಗೆ ಹಾಜರುಪಡಿಸಿರುತ್ತಾರೆ.

4. ಮುಂದುವರೆದು, ಸದರಿ ಕೆನರಾ ಬ್ಯಾಂಕ್ ATPAR ಬ್ರಾಂಚ್ ಆರೋಪಿತರ ಖಾತೆಯಲ್ಲಿ ಹಣದ ಕೊರತೆ Exceeds arrangement ಇದೆ ಎಂದು ದಿಃ 22.10.2024 ರಂದು ಸದರಿ ಬ್ಯಾಂಕ್ ನವರು ಬೌನ್ಸ್ ಆಗಿರುವ ಚೆಕ್ಕನ್ನು ಜೊತೆಯಲ್ಲಿ ದಿಃ 22.10.2024 ರ ಮೆಮೋದೊಂದಿಗೆ ವಾದಿಗೆ ಹಿಂತಿರುಗಿಸಿರುತ್ತಾರೆ. ಆರೋಪಿತರು ವಾದಿಗೆ ಕ್ರಯದ ಮೊತ್ತ ರೂ. 4,50,000/- ರೂಗಳನ್ನು ಪಡೆಯಲು ಕೊಟ್ಟಿರುವ ಚೆಕ್ ಅಮಾನ್ಯತೆಗೊಂಡು ಬೌನ್ಸ್ ಮಾಡಿ ಚೆಕ್ಕನ್ನು ಹಿಂತಿರುಗಿಸಿದ್ದು, ವಾದಿಯು ಚೆಕ್ ಬೌನ್ಸ್ ಆಗಿರುವ ವಿಷಯವನ್ನು ಪ್ರತಿವಾದಿಗೆ ತಿಳಿಸಿದಾಗ ಆರೋಪಿತರು ಹಣ ಜಮಾ ಮಾಡಲು ಸ್ವಲ್ಪ ಕಾಲವಕಾಶ ಕೇಳಿದ್ದು, ನಂತರ ವಾದಿಗೆ ಪ್ರತಿವಾದಿಯು ಪರಿಚಯಸ್ಥರಾದ ಸೋಮಪ್ಪ ಪೂಜಾರಿ ಬಿನ್ ಮಂಜಪ್ಪ ಇವರ ಮೂಲಕ ಈ ವಿಷಯವನ್ನು ತಿಳಿಸಿದ್ದು, ಪ್ರತಿವಾದಿಯು ವಾದಿಗೆ ಕೊಡಬೇಕಾದ ರೂ.4,50,000/- ಗಳನ್ನು ಪಾವತಿಸದೇ ನಂಬಿಕೆ ದ್ರೋಹ ಎಸಗಿದ್ದು, ಈ ಬಗ್ಗೆ ಸಾಗರದ ನ್ಯಾಯಾಲಯದಲ್ಲಿ ಚೆಕ್ ಕೇಸನ್ನು ದಾಖಲಿಸಿರುತ್ತಾರೆ. ಸದರಿ ಕ್ರಯಪತ್ರದ ಆಧಾರದ ಮೇಲೆ ಖಾತೆ ಬದಲಾವಣೆ ತಹಶೀಲ್ದಾರ್ ರವರ ಕಛೇರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಹೀಗೆ ಖಾತೆ ಬದಲಾವಣೆ ಆದಲ್ಲಿ ವಾದಿಗೆ ತುಂಬಲಾರದ ನಷ್ಟ ಹಾಗೂ ಅನ್ಯಾಯ ಉಂಟಾಗುತ್ತದೆ. ವಾದಿಯು ತಹಶೀಲ್ದಾರ್ ರವರ ಕಛೇರಿಗೆ ಖಾತೆ ಬದಲಾವಣೆ ಮಾಡಬಾರದಾಗಿ ತಕಾರಾರು ಅರ್ಜಿ ಸಲ್ಲಿಸಿದ್ದು ಸಹ ಇರುತ್ತದೆ. ಆದಾಗ್ಯೂ ಸಹ ಪ್ರತಿವಾದಿ ಖಾತೆ ಬದಲಾವಣೆ ಆಗಿ ದಾವಾ ಸ್ವತ್ತನ್ನು ಬೇರೆಯವರಿಗೆ ಪರಭಾರೆ

ವಗೈರೆ ಮಾಡಿದ್ದಲ್ಲಿ ಬಹುವ್ಯಾಜ್ಯಕ್ಕೆ ಕಾರಣವಾಗುತ್ತದೆ ಹಾಗೂ ವಾದಿಗೆ ಹೇರಳ ನಷ್ಟ ಉಂಟಾಗುತ್ತದೆ.

5. ಮುಂದುವರೆದು, ವಾದಿಗೆ ಪಾವತಿಸಬೇಕಾದ ಕ್ರಯದ ಮೊತ್ತವನ್ನು ಪಾವತಿಸದೇ ಚೆಕ್ ನೀಡಿ ಡಿಸಾನರ್ ಆದ್ದರಿಂದ ಸೊರಬ ಉಪನೊಂದಣಾಧಿಕರಿಗಳ ಕಛೇರಿಯ 1 ನೇ ಪುಸ್ತಕದ ದಸ್ತಾವೇಜು ನಂಬರ್ ಎಸ್.ಆರ್.ಬಿ-1-10595-2024-25 ದಿಃ 19.10.2024 ರಂದು ನೊಂದಾಯಿಸಲ್ಪಟ್ಟ ಕ್ರಯದ ವ್ಯವಹಾರವು ಅಸಿಂಧು ಎಂದು ಘೋಷಿಸುವ ಸಂಬಂಧ ವಾದಿ ಸನ್ನಿಧಿ ನ್ಯಾಯಾಲಯಕ್ಕೆ ದಾವೆ ತಂದಿದ್ದು, ಪ್ರತಿವಾದಿ ಕ್ರಯಪತ್ರವನ್ನು ಬರೆದುಕೊಟ್ಟಿದ್ದರ ಹಾಗೂ ಅದು ನೊಂದಾವಣೆ ಆದ ಕಾರಣ ಶೆಡ್ಯೂಲ್ ಸ್ವತ್ತಿನ ಸ್ವಾಧೀನ ಪಡೆಯಲು ಹಾಗೂ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಅಡ್ಡಿ ಆತಂಕಪಡಿಸಲು ಪ್ರಯತ್ನ ನಡೆಸುತ್ತಿದ್ದಾರೆ. ದಿಃ 19.10.2024 ರಂದು ಕ್ರಯಪತ್ರ ನೊಂದಾವಣೆ ಆದ ದಿನದಿಂದಲೇ ಶೆಡ್ಯೂಲ್ ಸ್ವತ್ತಿನ ಸ್ವಾಧೀನ ಪಡೆಯಲು ಹಾಗೂ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಅಡ್ಡಿ ಆತಂಕಪಡಿಸುತ್ತಾರೆ. ಕ್ರಯದ ಮೊತ್ತ ವಾದಿಗೆ ಸಂದಾಯವಾಗುವವರೆಗೆ ದಾವಾ ಸ್ವತ್ತಿಗೆ ಪ್ರತಿವಾದಿಯಾಗಲೀ ಅವನ ತರ್ಫಿನ ಜನರಾಗಲೀ ಅಕ್ರಮ ಪ್ರವೇಶ ಮಾಡಿ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಅಡ್ಡಿ ಆತಂಕಪಡಿಸದಂತೆ ಅವರುಗಳನ್ನು ಏಕಪಕ್ಷೀಯ ಆದೇಶದ ಮೂಲಕ ತಡೆಯುವುದು ಅವಶ್ಯಕವಾಗಿರುತ್ತದೆ.

6. ಮುಂದುವರೆದು, ಪ್ರತಿವಾದಿಯು ಹಣಬಲ, ಜನಬಲ ಹಾಗೂ ರಾಜಕೀಯ ಬೆಂಬಲ ಹೊಂದ ವ್ಯಾಜ್ಯಕಾರನಾಗಿರುವುದರಿಂದ ಪ್ರತಿವಾದಿಯ ಕಾನೂನು ಬಾಹಿರ ಕೃತ್ಯವನ್ನು ತಡೆಯಲು ಹಾಗೂ ದಾವಾ ಸ್ವತ್ತಿನ ಸ್ವಾಧೀನವನ್ನು ಉಳಿಸಿಕೊಳ್ಳಲು ವಾದಿಗೆ ಸನ್ನಿಧಿ ನ್ಯಾಯಾಲಯದ ಸಹಾಯವಿಲ್ಲದೆ ಸಾಧ್ಯವಿರುವುದಿಲ್ಲ. ಅನುಕೂಲತೆಯ ಒಲವು ತನ್ನ ಪರವಾಗಿರುತ್ತದೆ. ವಾದಿಯ ಅರ್ಜಿಯನ್ನು ಮಂಜೂರು ಮಾಡದಿದ್ದಲ್ಲಿ ವಾದಿಗೆ ತುಂಬಲಾರದ ನಷ್ಟ ಹಾಗೂ ಅನ್ಯಾಯ ಉಂಟಾಗುತ್ತದೆ. ಆದ್ದರಿಂದ ಸನ್ನಿಧಿ ನ್ಯಾಯಾಲಯದಲ್ಲಿ ವಾದಿಯು ಖಾಯಂ ಪ್ರತಿಬಂಧಕಾಜ್ಞೆ ಆದೇಶ ಕೋರಿ ಈ ದಾವೆಯನ್ನು ಸಲ್ಲಿಸಿದ್ದು ವಾದಿಯು ತನ್ನ ಪರವಾಗಿ ಮೇಲ್ನೋಟದ ದಾವೆ ಹಾಗೂ ಅನುಕೂಲತೆಯ ಒಲವು ಇರುವುದರಿಂದ, ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಪುರಸ್ಕರಿಸುವಂತೆ ವಾದಿಯು ತನ್ನ ವಾದಪತ್ರದಲ್ಲಿ ಕೋರಿರುತ್ತಾರೆ.

7. ದಾವೆಯನ್ನು ಹೊಡಿದ ನಂತರ ಪ್ರತಿವಾದಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಯಾದ ನಂತರ ಪ್ರತಿವಾದಿಯು ತನ್ನ ವಕೀಲರು ಮುಖಾಂತರ ನ್ಯಾಯಾಲಯದ ಮುಂದೆ ಹಾಜರಾಗಿ

ತಮ್ಮ ಪರವಾಗಿ ಯಾವುದೇ ಪ್ರತಿವಾದ ಪತ್ರವನ್ನು ಹಾಗೂ ಮಧ್ಯಂತರ ಅರ್ಜಿ ಸಂಖ್ಯೆ 1 ಕ್ಕೆ ತಕರಾರು ಸಲ್ಲಿಸಿರುವುದಿಲ್ಲ.

8. ವಾದಿಯ ಪರ ವಕೀಲರು ಮಂಡಿಸಿರುವ ವಾದವನ್ನು ಆಲಿಸಲಾಯಿತು ಹಾಗೂ ವಾದಿಯು ಹಾಜರುಪಡಿಸಿದ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

9. ಈ ಸಂದರ್ಭದಲ್ಲಿ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

## ಅಂಶಗಳು

1. ವಾದಿಯು ತಮ್ಮ ಪರವಾಗಿ ಮೇಲ್ನೋಟದ ದಾವೆ ಇದೆ ಎಂದು ಸಾಬೀತುಪಡಿಸುವರೇ?
2. ಅನುಕೂಲತೆಯ ಒಲವು ವಾದಿಯ ಪರವಾಗಿ ಇದೆಯೇ?
3. ವಾದಿಗೆ ಮಧ್ಯಂತರ ಅರ್ಜಿ ಸಂಖ್ಯೆ I ಪುರಸ್ಕರಿಸದಿದ್ದರೆ, ತುಂಬಲಾರದ ನಷ್ಟ, ಸರಿಪಡಿಸಲಾಗದ ಕ್ಷತಿ ಉಂಟಾಗುತ್ತದೆಯೇ?
4. ಏನು ಆದೇಶ?

10. ಮೇಲಿನ ಅಂಶಗಳಿಗೆ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರುತ್ತದೆ:

ಅಂಶ 1: **ನಕಾರಾತ್ಮಕವಾಗಿ.**

ಅಂಶ 2: **ನಕಾರಾತ್ಮಕವಾಗಿ.**

ಅಂಶ 3: **ನಕಾರಾತ್ಮಕವಾಗಿ.**

ಅಂಶ.4: ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ.

## ಕಾರಣಗಳು

**11. ಅಂಶಗಳು 1 ರಿಂದ 3:-** ಈ ಮೂರು ಅಂಶಗಳು ಒಂದಕ್ಕೊಂದು ಅಂತರ ಸಂಬಂಧ ಹೊಂದಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ವಾದಿಯ ಪರ ವಕೀಲರು ವಾದ ಮಂಡಿಸುತ್ತಾ ದಾವಾ ಆಸ್ತಿಯು ಸೊರಬ ತಾಲ್ಲೂಕು, ಉಳವಿ ಹೋಬಳಿ, ಮೂಡುಗೋಡು ಗ್ರಾಮದ ಸರ್ವೆ ನಂ.1/10 ರ ಒಟ್ಟು ವಿಸ್ತೀರ್ಣ 00.16 ಗುಂಟೆ ಖುಷ್ಕಿ ಜಮೀನು ಇದ್ದು, ಸದರಿ ಜಮೀನಿಗೆ ಮಾಲೀಕರು, ಹಕ್ಕುದಾರರು ಹಾಗೂ ಸ್ವಾಧೀನದಾರರಾಗಿದ್ದು, ತಮ್ಮ ಗೃಹಕೃತ್ಯದ ಅಡಚಣೆ ಸಂಬಂಧ ಮಾರಾಟ ಮಾಡಲು ತೀರ್ಮಾನಿಸಿ, ಅದರಂತೆ ಪ್ರತಿವಾದಿಯರು ಸದರಿ 00-15 ಗುಂಟೆ ಜಮೀನನ್ನು 4,50,000/- ಕ್ರಯಕ್ಕೆ ಪಡೆಯಲು ಕೇಳಿದ್ದು, ಅದರಂತೆ ದಿಃ 18.10.2024 ರಂದು ಕ್ರಯಪತ್ರವನ್ನು ಬರೆಯಿಸಿ, ಸದರಿ ಕ್ರಯಪತ್ರವನ್ನು ದಿಃ 19.10.2024 ರಂದು ಸೊರಬ ನೋಂದಾಯಿತ ಕಛೇರಿಯಲ್ಲಿ ನೋಂದಣಿ ಆಗಿರುತ್ತದೆ. ಅದರಂತೆ ಪ್ರತಿವಾದಿಯು 4,50,000/-ರೂ.ಗಳ ಮೌಲ್ಯದ ಕೆನರಾ ಬ್ಯಾಂಕ್, ಸಾಗರ ಶಾಖೆಯ ಚೆಕ್ ಅನ್ನು ಕೊಟ್ಟಿದ್ದು, ಅದರಂತೆ ವಾದಿಯು ಸದರಿ ಚೆಕ್‌ಅನ್ನು ಜಮಾ ಮಾಡಲು ಬ್ಯಾಂಕಿಗೆ ಹಾಜರುಪಡಿಸಿದಾಗ, ಸದರಿ ಬ್ಯಾಂಕಿನವರು ಖಾತೆಯಲ್ಲಿ ಹಣದ ಕೊರತೆ ಇದೆ ಎಂದು ಹಿಂತಿರುಗಿಸಿರುತ್ತಾರೆ. ನಂತರ ಸದರಿ ವಿಷಯಹದ ಬಗ್ಗೆ ಪ್ರತಿವಾದಿಯರಿಗೆ ಮಾಹಿತಿ ನೀಡಿದಾಗ ಪ್ರತಿವಾದಿಯರು ಹಾಣವನ್ನು ಮರು ಪಾವತಿಸುತ್ತೇವೆ ಎಂದು ತಿಳಿಸಿರುತ್ತಾರೆ. ತದನಂತರ ಸದರಿ ನೋಂದಾಯಿತ ಕ್ರಯಪತ್ರದ ಆಧಾರದ ಮೇಲೆ ಪ್ರತಿವಾದಿಯರು ಖಾತೆ ಬದಲಾವಣೆ ಮಾಡಬಹುದು ಎಂದು ವಾದಿಯು ತಹಶೀಲ್ದಾರ್ ರವರಿಗೆ ತಕಾರಾರು ಅರ್ಜಿ ಸಲ್ಲಿಸಿರುತ್ತಾರೆ. ಆ ಕಾರಣ ಪ್ರತಿವಾದಿಯು ಕ್ರಯಪತ್ರದ ಮೊತ್ತವನ್ನು ವಾದಿಗೆ ನೀಡದೇ ಇರುವುದರಿಂದ ಮೋಸ ಮಾಡಿದ್ದು, ಅದರಂತೆ ಸದರಿ ಕ್ರಯಪತ್ರವು ಅಸಿಂಧು ಎಂದು ಘೋಷಣೆ ಮಾಡಲು ಈ ದಾವೆಯಲ್ಲಿ ಕೋರಿರುತ್ತಾರೆ. ವಾದಿಯು ತನ್ನ ವಾದಪತ್ರದೊಂದಿಗೆ ಸದರಿ ಚೆಕ್ ನ ನಕಲು ಪ್ರತಿ, ಬ್ಯಾಕಿನ ಮೆಮೋ ಹಾಗೂ ಸಾಮಾನ್ಯ ಅಧಿಕಾರ ಪತ್ರ ಶುದ್ಧ ಕ್ರಯಪತ್ರವನ್ನು ಹಾಜರುಪಡಿಸಿರುತ್ತಾರೆ. ಈ ಪ್ರಕರಣದಲ್ಲಿ ವಾದಿಯು ಮೇಲ್ನೋಟದ ದಾವೆ ಅನುಕೂಲತೆಯ ಒಲವು ವಾದಿ ಪರ ಇದೆ ಎಂದು ಈ ಮಧ್ಯಂತರ ಅರ್ಜಿ ಸಂಖ್ಯೆ I ಅನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

12. ಸಿವಿಲ್ ಪ್ರಕ್ರಿಯೆ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ವಿಲೇ ಮಾಡುವಾಗ ನ್ಯಾಯಾಲಯಕ್ಕೆ ಸದರಿ ಅರ್ಜಿಯನ್ನು ಸಲ್ಲಿಸಿದಂತಹ ಪಕ್ಷಗಾರನ್ನು ತಮ್ಮ ಪರವಾಗಿ ಮೇಲ್ನೋಟದ ದಾವೆ ಇದೆ ಎನ್ನುವುದನ್ನು ಹಾಗೂ ಅನುಕೂಲತನೆಯ ಒಳವು ತನ್ನ ಪರವಾಗಿ ಇದೆ, ಒಂದು ವೇಳೆ ಅರ್ಜಿಯಲ್ಲಿ ಕೋರಿರುವಂತೆ ಪ್ರತಿಬಂಧಕಾಜ್ಞೆಯನ್ನು ನೀಡದೆ ಇದ್ದ ಪಕ್ಷದಲ್ಲಿ ತನಗೆ ಪ್ರತಿವಾದಿಗಿಂತ ಹೆಚ್ಚು ನಷ್ಟ ಹಾಗೂ ಹಾನಿ

ಉಂಟಾಗುತ್ತದೆ. ಅದರಂತೆ ಸದರಿ ಅರ್ಜಿಯನ್ನು ಸಲ್ಲಿಸಿದಂತಹ ವ್ಯಕ್ತಿಯು ಮೇಲ್ನೋಟಕ್ಕೆ ಸಾಬೀತುಪಡಿಸುವ ಹೊಣಾಗಾರಿಕೆಯನ್ನು ಹೊಂದಿರುತ್ತಾನೆ. ಮೇಲ್ನೋಟದ ದಾವೆಯೆಂದರೆ ವಾದಿಯು ತನಗೆ ಒಂದು ವಸ್ತು ವಿಷಯದ ಬಗ್ಗೆ ತನಗೆ ಇದೆ ಎಂದು ಹೇಳಲಾದ ಹಕ್ಕಿನ ಬಗ್ಗೆ ವಿಚಾರಣೆಯಾಗಬಹುದಾದ ಪ್ರಕರಣ ಅಂದರೆ ಮೇಲ್ನೋಟಕ್ಕೆ ದಾವೆಯನ್ನು ವಿಚಾರಣೆ ಮಾಡಬಹುದೆಂದು ನ್ಯಾಯಾಲಯಕ್ಕೆ ಮೊದಲನೆಯದಾಗಿ ಕಂಡುಬರಬೇಕಾಗುತ್ತದೆ. ಕೇವಲ ಮೇಲ್ನೋಟದ ದಾವೆ ತನ್ನ ಪರವಾಗಿ ಇದೆ ಎಂದ ಮಾತ್ರಕ್ಕೆ ವಾದಿಯು ತಾತ್ಕಾಲಿಕ ನಿರ್ಬಂದಕಾಜ್ಞೆ ಪರಿಹಾರಕ್ಕೆ ಅರ್ಹನಾಗಿರುವುದಿಲ್ಲ. ಅದನ್ನು ಹೊರತುಪಡಿಸಿ ವಾದಿಯು ತನ್ನ ಪರವಾಗಿ ಅನುಕೂಲತೆಯ ಒಳವು ಅಂದರೆ ಒಂದು ವೇಳೆ ಆರ್ಜಿಯನ್ನು ಪುರಸ್ಕರಿಸದೇ ಇದ್ದರೆ ಪ್ರತಿವಾದಿಯರಿಗೆ ಹೋಲಿಸಿದ್ದಲ್ಲಿ ತನಗೆ ಹೆಚ್ಚಿನ ಅನಾನೂಕೂಲತೆ ಉಂಟಾಗುತ್ತದೆಂದು ನ್ಯಾಯಾಲಯದ ಮನದಟ್ಟ ಮಾಡಬೇಕಾಗುತ್ತದೆ. ಅದೇ ರೀತಿ ತನ್ನ ಪರವಾಗಿ ತಾತ್ಕಾಲಿಕ ನಿರ್ಬಂದಕಾಜ್ಞೆಯನ್ನು ನೀಡದೆ ಇದ್ದ ಪಕ್ಷದಲ್ಲಿ ತನಗೆ ಪ್ರತಿವಾದಿಯರಿಗಿಂತ ಹೆಚ್ಚು ಹಾನಿ ಮತ್ತು ನಷ್ಟು ಉಂಟಾಗುತ್ತದೆ ಹಾಗೂ ಸದರಿ ನಷ್ಟವನ್ನು ಯಾವುದರಿಂದಲೂ ಭರಿಸಲು ಸಾಧ್ಯವಿಲ್ಲವೆಂದು ಸಾಬೀತುಪಡಿಸಬೇಕಾಗುತ್ತದೆ. ಸದರಿ 3 ಅಂಶಗಳನ್ನು ವಾದಿಯು ಸಾಬೀತುಪಡಿಸಿದರೂ ಸಹಾ ತಾತ್ಕಾಲಿಕ ಪ್ರತಿಬಂದಕಾಜ್ಞೆ ಆದೇಶ ನೀಡುವುದು ನ್ಯಾಯಾಲಯದ ವಿವೇಚನೆಗೆ ಬಿಟ್ಟ ವಿಚಾರವಾಗಿರುತ್ತದೆ. ಒಂದು ವೇಳೆ ವಾದಿಯು ವಾಸ್ತವ ಸಂಗತಿಗಳನ್ನು ಮರೆಮಾಚಿ ಶುದ್ಧ ಹಸ್ತದಿಂದ ನ್ಯಾಯಾಲಯಕ್ಕೆ ಬಂದಿಲ್ಲವೆಂದು ಕಂಡು ಬಂದರೂ ಸಹಾ ವಾದಿಗೆ ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶಕ್ಕೆ ಅರ್ಹನಾಗಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಪ್ರಸ್ತುತ ಪ್ರಕರಣವನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ.

13. ವಾದಿಯು ದಾವಾ ಆಸ್ತಿಯ ಮಾಲೀಕನಾಗಿದ್ದು, ವಾದಿಯು ಗೃಹಕೃತ್ಯದ ಅಡಚಣೆ ಸಂಬಂಧ ಮಾರಾಟ ಮಾಡಲು ತೀರ್ಮಾನಿಸಿ, ಅದರಂತೆ ಪ್ರತಿವಾದಿಯು 16 ಗುಂಟೆ ಜಮೀನಿನಲ್ಲಿ 15 ಗುಂಟೆ ಜಮೀನನ್ನು 4,50,000/- ರೂ.ಗಳಿಗೆ ಕ್ರಯಕ್ಕೆ ಪಡೆಯಲು ಒಪ್ಪಿಕೊಂಡಿದ್ದು, ಅದರಂತೆ ದಿನಾಂಕ 18.10.2024 ರಂದು ಕ್ರಯ ಪತ್ರವನ್ನು ಬರೆಯಿಸಿ, ಸದರಿ ಕ್ರಯ ಪತ್ರವು ದಿನಾಂಕ 19.10.2024 ರಂದು ಸೊರಬದ ನೋಂದಾವಣೆ ಕಛೇರಿಯಲ್ಲಿ ಕಾನೂನು ಬದ್ಧವಾಗಿ ನೋಂದಣಿಯಾಗಿರುತ್ತದೆ. ಅದೆ ದಿನ ಪ್ರತಿವಾದಿಯು ವಾದಿಗೆ ತಮ್ಮ ಕೆನರಾ ಬ್ಯಾಂಕ್, ಸಾಗರ ಶಾಖೆಯ ಒಂದು ಚೆಕ್ ಅನ್ನು ನೀಡಿದ್ದು, ಅದರಂತೆ ವಾದಿಯ ಮಗ ಸದರಿ ಚೆಕ್ ಅನ್ನು ಜಮಾ ಮಾಡಲು ಬ್ಯಾಂಕಿಗೆ ಹಾಜರುಪಡಿಸಿದ್ದು, ಸದರಿ ಖಾತೆಯಲ್ಲಿ ಸಾಕಷ್ಟು ಮೊತ್ತವಿಲ್ಲ ಎಂದು ಹಿಂತಿರುಗಿಸಿರುತ್ತಾರೆ ಪ್ರತಿಪಾಧಿಸಿರುತ್ತಾರೆ. ಈ

ಪ್ರಕರಣದಲ್ಲಿ ವಾದಿಯ ವಾದ ಪತ್ರದಲ್ಲಿ ನಮೂದಿಸಿದ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಲ್ಲಿ ವಾದಿಯು ದಾವಾ ಸ್ವತ್ತಿನ ಮಾಲೀಕನಾಗಿದ್ದು, ನೋಂದಾಯಿತ ಕ್ರಯಪತ್ರದ ಮೂಲಕ 15 ಗುಂಟೆ ಜಮೀನನ್ನು ಪ್ರತಿವಾದಿ ಪರವಾಗಿ ವರ್ಗಾಯಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅದೇ ರೀತಿ ಈ ಪ್ರಕರಣದಲ್ಲಿ ವಾದಿಯು ತನ್ನ ಮಧ್ಯಂತರ ಅರ್ಜಿಯಲ್ಲಿ, ಪ್ರತಿವಾದಿಗೆ ಅಕ್ರಮ ಪ್ರವೇಶ ಮಾಡಿ ಶಾಂತಿಯುತ ಸ್ವಾಧೀನಾನುಭಕ್ಕೆ ಅಡ್ಡಿ ಆತಂಕ ಪಡಿಸದಂತೆ ಮಧ್ಯಂತರ ಪ್ರತಿಬಂಧಕಾಜ್ಞೆಯನ್ನು ಕೋರಿರುತ್ತಾರೆ. ಆದರೆ ವಾದಿ ಹಾಜರುಪಡಿಸಿದ ಮೂಲ ನೋಂದಾಯಿತ ಕ್ರಯಪತ್ರದ ಪ್ರತಿಯನ್ನು ಪರಿಶೀಲಿಸಿದಲ್ಲಿ, ಸದರಿ ಕ್ರಯಪತ್ರದ ಪುಟ ಸಂಖ್ಯೆ 3 ರಲ್ಲಿ ದಾವಾ ಆಸ್ತಿ ನೋಂದಣಿ ಆಗುವ ದಿನ ದಿನಾಂಕ 19.10.2024 ರಂದು ದಾವಾ ಸ್ವತ್ತಿನ ಗಡಿ ಗುರುತುಗಳನ್ನು ತೋರಿಸಿ, ಸಾಕ್ಷಿದಾರರ ಸಮಕ್ಷಮ ಸ್ವಾಧೀನ ವಹಿಸಿಕೊಟ್ಟಿರುತ್ತಾರೆಂದು ಸ್ಪಷ್ಟವಾಗಿ ನಮೂದಿಸಿರುತ್ತಾರೆ. ಅಂದರೆ ದಾವೆ ದಾಖಲಿಸಿದ ದಿನದಂದು ವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇಲ್ಲವೆಂದು ನೋಂದಾಯಿತ ಕ್ರಯಪತ್ರದ ಮೂಲಕ ಸ್ಪಷ್ಟವಾಗಿ ಕಂಡುಬರುತ್ತದೆ.

14. ಒಂದು ವೇಳೆ ವಾದಿಗೆ ಸದರಿ ಕ್ರಯಪತ್ರದ ಮೊತ್ತವು ಸಂದಾಯವಾಗದೆ ಇದ್ದ ಸಂದರ್ಭದಲ್ಲಿ ಹಾಗೂ ಪ್ರತಿವಾದಿ ನೀಡಿದ ಚೆಕ್ ಅಮಾನ್ಯಗೊಂಡಿರುವುದರಿಂದ ವಾದಿಗೆ ಪರ್ಯಾಯ ದಾವೆಯನ್ನು ನಾಯಾಲಯದಲ್ಲಿ ಹೂಡಬಹುದಾಗಿದೆ. ಈ ಹಂತದಲ್ಲಿ ವಾದಿಯ ವಾದಪತ್ರದ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ್ದಲ್ಲಿ, ವಾದಿಯು ಮೇಲ್ನೋಟಕ ದಾವೆ ಅನುಕೂಲತೆಯ ಒಲವು ತನ್ನ ಪರವಾಗಿ ಇದೆ ಎಂದು ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತಾರೆ. ಅದೇ ರೀತಿ ಒಂದು ವೇಳೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿದಲ್ಲಿ ವಾದಿಗಿಂತ ಪ್ರತಿವಾದಿಗೆ ಹೆಚ್ಚಿನ ಹಾನಿ ಮತ್ತು ನಷ್ಟ ಉಂಟಾಗುವ ಸಾಧ್ಯತೆ ಇರುವುದರಿಂದ ಹಾಗೂ ಪ್ರತಿವಾದಿಯು ನೋಂದಾಯಿತ ಕ್ರಯಪತ್ರದ ಮೂಲಕ ದಾವಾ ಆಸ್ತಿಯನ್ನು ಖರೀದಿಸಿರುವುದರಿಂದ ವಾದಿಗಿಂತ ಪ್ರತಿವಾದಿಗೆ ಹೆಚ್ಚಿನ ಹಾನಿ ಮತ್ತು ನಷ್ಟ ಉಂಟಾಗುವ ಸಾಧ್ಯತೆ ಇರುವುದರಿಂದ ಮೇಲಿನ **ಅಂಶಗಳು 1 ರಿಂದ 3 ಅನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

15. **ಅಂಶ 4:** ಅಂಶಗಳು 1 ರಿಂದ 3 ರಲ್ಲಿನ ಚರ್ಚೆಯಿಂದ ಬಂದಂತ ಉತ್ತರದಿಂದಾಗಿ, ಈ ಕೆಳಕಂಡಂತೆಃ

**<u>ಆದೇಶ</u>**

ವಾದಿಯು ಸಿವಿಲ್ ಪ್ರಕ್ರಿಯೆ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆI ಅನ್ನು ತಿರಸ್ಕರಿಸಲಾಗಿದೆ.

*(ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರರರಿಗೆ ಕೊಟ್ಟು ಅದನ್ನು ಅವರಿಂದ ಬೆರಳಚ್ಚುಪಡಿಸಿ ಗಣಕೀಕೃತಗೊಳಿಸಿದ್ದು, ನಂತರ ತಿದ್ದುಪಡಿ ಮಾಡಿ, ಸಹಿ ಮಾಡಿ ಇಂದು ಅಂದರೆ 18 ನೇ ಜೂನ್, 2026 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)*

**(ರಾಜು. ಕೃ .ಶೇಡಬಾಳ್‌ಕರ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು ಸೊರಬ.